ಇನ್ನೇನು ಮದುವೆಗೆ ಇಪ್ಪತ್ತು ದಿನಗಳೂ ಉಳಿದಿಲ್ಲ. ಆಗಲೇ ಒಂದು ಅವಘಡ ಸಂಭವಿಸಿತು. ಆ ಮನೆಯಲ್ಲಿ ತನ್ನ ಸೀರೆಯೊಂದಕ್ಕೆ ಚಂದದ ಬಳ್ಳಿಗಳ ಕಸೂತಿ ಹಾಕುತ್ತಲಿದ್ದ ಶಾಹೆನಾಳ ಕಿವಿಗೆ ಕುಕ್ಕರ್ ಜೋರಾಗಿ ಸೀಟಿ ಹಾಕಿದ್ದು ಕೇಳಿದ್ದರೂ ಅವಳು ಎದ್ದಿರಲಿಲ್ಲ. ಹೇಗೋ ಅಡಿಗೆ ಮನೆಯಲ್ಲಿ ಉಮ್ಮ, ಕೆಲಸದ ಯಾಸ್ಮಿನ್ ಯಾರಾದರೂ ಇದ್ದೇ ಇರುತ್ತಾರೆ ಎಂದು ಕೈಯಲ್ಲಿ ಹಿಡಿದ ಕೆಲಸ ಅರ್ಧಕ್ಕೇ ಬಿಟ್ಟು ಏಳಲಾರದ ಸಂಕಟಕ್ಕೆ ಹಾಗೇ ಸೀರೆಯನ್ನು ಹರವಿ ಕುಳಿತೇ ಇದ್ದಳು. ಹಿತ್ತಲ ಸಂಡಾಸ್ ರೂಮಿಗೆ ಹೋಗಿದ್ದ ಉಮ್ಮ "ಶಾಹೆನಾ, ಸ್ವಲ್ಪ ಕುಕ್ಕರ್ ನೋಡೇ..." ಎಂದು ಕೂಗು ಹಾಕಿದಾಗ "ಯಾ ಅಲ್ಲಾ! ಒಂದು ಕೆಲಸಾನ್ನೂ ಪೂರ್ತಿ ಮಾಡಲಿಕ್ಕೆ ಬಿಡುವುದಿಲ್ಲ" ಎಂದು ಗೊಣಗುತ್ತ ಎದ್ದಿದ್ದಳು. ಯಾಸ್ಮಿನ್‌ಗೆ ಕುಕ್ಕರ್ ಏರಿಸಲು ಇಳಿಸಲು ಬರುವದಿಲ್ಲ. ಉಮ್ಮ ಅವಳಿಗೆ ಅದನ್ನೆಲ್ಲ ಕಲಿಸಿಯೂ ಇಲ್ಲ. ಕುಕ್ಕರ್ ಇಡುವುದು, ಮಸಾಲೆ ಅರೆಯುವುದು, ತರಕಾರಿ ಹೆಚ್ಚುವುದು. ಇಂಥ ಕೆಲಸಗಳನ್ನು ಅವರೇ ಮಾಡುತ್ತಾರೆ. ಕುಕ್ಕರ್‌ನ ಪ್ರೆಶರ್‌ಗೆ ತನ್ನಿಂದ ತಾನೇ ಸಿಡಿದ ಮುಚ್ಚಳ, ಬಿಸಿ ಲಾವದ ಹಬೆಯೊಂದಿಗೇ ಪಾತ್ರೆಯಲ್ಲಿ ಬೆಂದ ಪದಾರ್ಥವೂ ಅಷ್ಟೇ ರಭಸದಿಂದ ಶಾಹೆನಾಳ ಮುಖ–ಮೈಗೆ ಸಿಡಿದಿದ್ದು ತೀರಾ ಆಕಸ್ಮಿಕವಾಗಿ. ಅವಳ ಚೀರಾಟ, ಬೊಬ್ಬೆ ಕೇಳಿ ಹೊರಗಿದ್ದವರೆಲ್ಲ ಓಡಿಬಂದರು. ಒಂದೇ ಗಳಿಗೆಯಲ್ಲಿ ಆ ಮನೆ ನೋವಿನ ಗೂಡಾಯಿತು.

★★★

ದುಬಾರಿ ಚಿಕಿತ್ಸೆಗಳ ನಂತರವೂ ಶಾಹೆನಾಳ ಮುಖದ ವಿಕಾರ ಅಷ್ಟಿಷ್ಟು ಉಳಿದುಕೊಂಡು ಅಂದದ ಮೊಗದ ಪೂರ್ತಿ ಚಂದವನ್ನೇ ಹಾಳುಗೆಡವಿತ್ತು. ಕೈ–ತೋಳುಗಳಿಗೆಲ್ಲ ಕಪ್ಪು ಕಲೆಗಳು ಶಾಶ್ವತವಾಗಿ ಉಳಿದುಹೋದರೆ, ಮುಖದ ತುಂಬ ದಾಳಿ ಮಾಡಿದ್ದ ಕಲೆಗಳು, ಹಣೆಯಂತೂ ಪೂರ್ತಿ ಬೆಂದುಹೋಗಿ ಹೊಸ ಚರ್ಮ ಬಂದರೂ ಸುಕ್ಕುಗಟ್ಟಿ ನೆರಿಗೆಗಳು ಎದ್ದುಬಿಡುತ್ತಿದ್ದವು. ಒಟ್ಟಿನಲ್ಲಿ ನೋಡಿದವರು ಛೇ! ಎಂಥ ಚಂದದ ಹುಡುಗಿಗೆ ಹೀಗಾಗಬಾರದಿತ್ತು ಎಂದು ಸಂಕಟಪಡುವಂತಿದ್ದಳು.

ಈ ನಡುವೆ ಗಂಡಿನ ಮನೆಯವರು ಸಾರಾಸಗಟಾಗಿ ಸಂಬಂಧ ತಿರಸ್ಕರಿಸಿಬಿಟ್ಟಾಗ ಶಾಹೆನಾ ದಿಗ್ಭ್ರಾಂತಳಾದಳು. ಅಬ್ಬಾ ಅಂತೂ ಅಲ್ಲಾಡಿ ಹೋದರು.

ಮದುವೆಯ ಸಿದ್ಧತೆಗಳೆಲ್ಲ ಮುಗಿದಿವೆ. ಸರೀಕರಲ್ಲಿ, ನೆಂಟರಿಷ್ಟರಲ್ಲಿ ಆಮಂತ್ರಣ ನೀಡಿಯಾಗಿದೆ, ಸಜೀದನೂ ಬರುವವನಿದ್ದಾನೆ.

"ನೀವು ಹೋಗಿ ಸಮಾಧಾನದಿಂದ ಹೇಳಿ ಬನ್ನಿ. ಅವರ ಕಾಲಾದರೂ ಹಿಡಿದು ಈ ಮದುವೆ ನಡೆಯುವಂತೆ ಮಾಡಿ..." ಶಾಹೆನಾಳ ಉಮ್ಮ ಜೋರಾಗೇ ಅತ್ತಿದ್ದರು.

ಅವರೆದೆ ಮುದ್ದು ಮಗಳಿಗೆ ಬಂದ ಅವಸ್ಥೆಯನ್ನು ಕಂಡು ಬೆಂದು ಹೋಗಿತ್ತು.

ಶಾಹೆನಾ ಮತ್ತು ಅಜ್ಜಿ ಮಾತು ಕಳೆದುಕೊಂಡು ಮೌನವಾಗಿ ನಡೆಯುವ ವಿದ್ಯಮಾನಗಳನ್ನು ನೋಡುತ್ತಲಿದ್ದುಬಿಟ್ಟರು.

ಆದರೂ... ಜಗುಲಿಯಲ್ಲಿ ಒಂಟಿಯಾಗಿ ಕುಳಿತು ಏನನ್ನೋ ದೀರ್ಘವಾಗಿ ಚಿಂತಿಸುವ, ನಗು ಉತ್ಸಾಹಗಳ ಲವಲೇಶವೂ ಇರದೇ ಮಂಕಾಗಿ ಓಡಾಡುವ ಶಾಹೆನಾ ಅಕ್ಕಳನ್ನು ಕಂಡು ಹಮೀದೇ ಕೂಡ ಕಣ್ಣೀರು ಹಾಕಿದ್ದ.

"ದೇವರೇ ಶಾಹೆನಾಕ್ಕಳನ್ನು ಮೊದಲಿನಂತೆ ಮಾಡು" ಅವನ ಹೃದಯದ ಪ್ರಾರ್ಥನೆ.

ಶಾಹೆನಾಳ ಅಬ್ಬಾ, ಗಂಡಿನ ಊರಿನಿಂದ ಸೋತ ಮುಖದಲ್ಲಿ ಬಂದರು.

"ನಾನೆಷ್ಟೋ ತಿಳಿಸಿ ಹೇಳಿದೆ. ನೀವೊಮ್ಮೆ ಬಂದು ನೋಡಿ, ಕೆಲ ಕಪ್ಪು ಕಲೆಗಳ ಹೊರತಾಗಿ ಅವಳು ಮೊದಲಿನ ಶಾಹೆನಾಳೇ. ನನ್ನ ಮಗಳ ಹೃದಯ ಕಲೆಯಿಲ್ಲದ್ದು, ನಿಮಗೆ ಬೆರೆತು ಜೀವನ ಸಾಗಿಸುತ್ತಾಳೆ... ಎಂದೆಷ್ಟೇ ಸಮಜಾಯಿಸಿದರೂ, ಬೇಡಿಕೊಂಡರೂ ಅವರದ್ದು ಒಂದೇ ವಾದ.